2. ಸದರೀ ತಾಲ್ಲೂಕಿನ ಅಮಲ್ದಾರ್ರು ಪ್ರತ್ಯೇಕ ಪ್ರತ್ಯೇಕ ನೋಟಿಸ್‌ಗಳು ಬಂದ ಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಗೆ ಸದರೀ ಇನಾಂದಾರ್ರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟಿಸ್‌ಗಳನ್ನ ದೇರ್‌ಮಾಡದೆ ಕೂಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಜಿಲ್ಲರೆ ಇನಾಂಗಳ ಬಗ್ಗೆ ಈ ಆಫಿಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಯಿರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್ಸ್.

ಫಾರೆಸ್ಟ್ಟ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ಟ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಿಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ಟ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.				ಅಸಲ್ ಖರೀದಿ (ರೂಪಾಯಿ)	
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ		..	..	ವಂದಕ್ಕೆ	150
2	ಇಂಗ್ಲಾಂಡ್ ಪ್ರೋರ್ಟರು ಬ್ರದರ್‌ಸ್‌ರ ಡಿಟೋ		..	..	,,	170
1	ಮದ್ರಾಸ್ ಓಕ್ಸ್‌ರವರ	ಡಿಟೋ	..	..	,,	250
1	ಡಿಟೋ	ಡಿಟೋ	ಡಿಟೋ	..	,,	188
1	ಡಿಟೋ	ಬೋರ್ಯಾಮ್‌ರವರ	ಡಿಟೋ	..	,,	85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಕೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ಯಯಿಸಲ್ಪಡುವದು.

ಯಲ್. ಕಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜ್ಞ ಡಿಸ್ಟ್ರಿಕ್ಟ್ಟ ಜಡ್ಜ್ಜಿಯವರ ಕೋರ್ಟ್‌ನಲ್ಲಿ.

ದಿವಾಳಿಯಾಬೆ ಡಿಕ್ರಿ ದೇಣೇದಾರ ಬೆಂಗಳೂರು ಹುರಿಯುವ ಪೇಟೇಲಿರುವ ಸರಿಗೆ ಪಿಲ್ಲಯ್ಯನ ವಿಷಯದಲ್ಲಿ—

ಸ್ಟ 1895—96ನೇ ಇಸವಿ ದಿವಾಳಿ ವ್ಯಾಜ್ಯದ ನಂಬರು 6.

ಹುಕುಂ,

ಮೇಲ್ಕಂಡ ಸರಿಗೆ ಪಿಲ್ಲಯ್ಯನು ಖುಲಾಸೆಯಾಗಬೇಕೆಂದು ಕೋರಿ ಬರೆದುಕೊಂಡ ಅರ್ಜಿಯು ಈ ಕೋರ್ಟು ರೂಬರೂ ಅರ್ಜಿದಾರನ ಸಮಕ್ಷಮದಲ್ಲಿಯೂ ಮತ್ತು ಐರ್ಜ ಅರ್ಜಿದಾರನ ದೇಣೇದಾರರಾದ 1ನೇ ಬೆಂಗಳೂರು ಬೀಗಮುದ್ರೆ ವ್ಯಾಪಾರಿಯಲ್ಲಿರುವ ವೆಂಕಪ್ಪನ ಮಗ ಮಾತೃಬಾಯಿ ಕೃಷ್ಣಪ್ಪ 2ನೇ ಮಾತೃಬಾಯಿ ಹೊನ್ನಪ್ಪ 3ನೇ ಕಬಾಡಿ ವೆಂಕೂಸಾ ಯವರ ತರಫ್ ಫಸ್ಟ್ಟ ಗ್ರೇಡ್ ಪ್ಲೀಡರ್ ಎ. ಸುಬ್ಬರಾಯರ ಯದುರಾಗಿಯೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದ್ಮಾಡಲ್ಪಡುವ ದೇಣೇದಾರ್ರಿಗೆ ಈ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—4ನೇ ಬೆಂಗಳೂರು ಗಾಣಿಗರ ಪೇಟೇಲಿರುವ ಗುಡಿ ವೀರಣ್ಣ, 5ನೇ ಡಿಟೋ ಸರಿಗೆ ಪೇಟೆಯಲ್ಲಿರುವ ಸಿದ್ದಯ್ಯ, 6ನೇ ಬೆಂಗಳೂರು ಲಾಲ್‌ಬಾಗ್ ವಾಪಹಳ್ಳಿಯಲಿರುವ ಸಾಹುಕಾರ್ ರುದ್ರಪ್ಪ,

ಇದರೀ ಸರಿಗೆ ಪಿಲ್ಲಯ್ಯನು ತನ್ನ ಸಾಲಗಾರ್ರಿಗೆ ಪಾವತಿ ಬಗ್ಗೆ ಮಾಹೆಯಾನಾ ತಪ್ಪದೆ ಈ ಕೋರ್ಟಿಗೆ (3—0—0) ಮೂರು ರೂಪಾಯಿ ಹಾಜರ್ಮಾಡುವ ಪರತ್ತಿನ ಮೇಲೆ ದಿವಾಳಿಯಾದವನೆಂದೂನ್ನೂ ಸಿವಿಲ್ ಪ್ರೊಸೆಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದನ್ನೂ ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ.

ಸ್ಟ 1895ನೇ ಇಸವಿ ನವಂಬರ್ 16ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

3ನೇ ಕ್ರಡಿಟರು ಕಬಾಡಿವೆಂಕೂಸಾ ಯವರನ್ನು ಮೇಲ್ಕಂಡ ದಿವಾಳಿಯಾದವನ ಜೆಂದಿಗಿಗೆ ರಿಸೀವರಾಗಿ ನೊಕರರ್ಮಾಡಲ್ಪಡತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿದೆ.

ಇದಕ್ಕೆ ಲಗತ್ತಾಗಿಯಿರುವ ಪಟ್ಟಿಯಲ್ಲಿ ಕಂಡ ಜನರು ಅವರ ಹೆಸರುಗಳಿಗೆ ಯದುರಾಗಿ ದಾಖಲಾಗಿ ಯಿರುವ ಸಾಲದ ಮೊಬಲಗುಗಳಿಗೆ ದೇಣೇದಾರರೆಂದು ರುಜು ಮಾಡಿದ್ದಾರೆಂದು ಯಿದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟಿರುತ್ತದೆ.

ನಂಬರ್	ಲೇಣೇದಾರ್ರ ಹೆಸರು ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜುವಾದ ನೊಬಲಗು.	ಸಾಲಗಳ ಸ್ವಭಾವ ಪ್ರತಿಫಲ ಮತ್ತು ಏನಾದರೂ ಈಡು.
1	1ನೇ ಕ್ರಡಿಟರು ಮಾತೃಬಾಯಿ ಕೃಷ್ಣಪ್ಪ ..	81— 8—0	ಬೆಂಗಳೂರು ಸಬ್ ಜಡ್ಜಿಯವರ ಕೋರ್ಟು 1893—94ನೇ ಇಸವಿ ಸ್ಮಾಲ್‌ಕಾಜು 1570ನೇ ನಂ. ಡಿಕ್ರಿ ಮೊಬಲಗು.
2	3ನೇ ಕ್ರಡಿಟರು ವೆಂಕೂಸಾ ..	190—10—8	ಸರಗೆ ಪಿಲ್ಲಯ್ಯ ವೆಂಕೂಸಾಗೆ ಬರದುಕೊಟ್ಟ 23—7—88ನೇ ತಾರೀಖಿನ ಆಧಾರ ಪತ್ರದ ಅಸಲು ಬಡ್ಡಿ ಮೊಬಲಗು.
		272— 4—0	ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟು 1895–96ನೇ ಇಸವಿ ಪ್ರೊವಿಜಿನಲ್ 377ನೇ ನಂಬರು ಡಿಕ್ರಿ ಮೊಬಲಗು.

ಸ್ಯ 1896ನೇ ಇಸವಿ ಫಿಬ್ರವರಿ 13ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿದೆ.

ದಿವಾಳಿಯಾದ ಡಿಕ್ರಿದೇಣೇದಾರ ಬೆಂಗಳೂರು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟು ದಫೇದಾರ್ ಗೋವಿಂದರಾಜು ಪಿಳ್ಳೆಯ ವಿಷಯದಲ್ಲಿ
ಸ್ಯ 1895—96ನೇ ಇಸವಿ ದಿವಾಳಿ ಕೇಸ್ ನಂಬರ್ 49.

ಹುಕುಂ,

ಮೇಲ್ಕಂಡ ಗೋವಿಂದರಾಜುಪಿಳ್ಳೆಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ಈ ಕೋರ್ಟು ರೂಬರೂ ಅರ್ಜಿದಾರನಾದ ಗೋವಿಂದರಾಜುಪಿಳ್ಳೆಯನ್ನೂ ಮತ್ತು ಸದರಿಯವನ ಲೇಣೇದಾರ್ರಾದ 2ನೇ ಬೆಂಗಳೂರು ಬೀಗಮುದ್ರೆ ಪೇಟೆಯಲ್ಲಿರುವ ಮಾತೃಬಾಯಿ ಹೊನ್ನಪ್ಪ, 3ನೇ ಬೆಂಗಳೂರು ದೊಡ್ಡ ದೇವರಜೀವನಹಳ್ಳಿಲಿರುವ ವೆಂಕಟಸಾಮಿಪಿಳ್ಳೆ, 6ನೇ ಬೆಂಗಳೂರು ಪೊಡ್ಡಲಾಲ್‌ಬಾಗ್ ಬಳಿ ಚಿಲ್ಲರೆ ಅಂಗಡಿ ಯಿಟ್ಟುಕೊಂಡಿರುವ ಮಿಠಾಯಿ ವೆಂಕಟಪ್ಪ ಇವರ ಯದುರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—1ನೇ ಬೆಂಗಳೂರು ತರಗಿನಪೇಟೆ ದೇವರಂಟಿ ಗುರಂಣ ಫಾತೀ ಇವನ ವಾರಸ್ದಾರ ದೇವರಂಟಿ ಮುನಿಯಲ್ಲಪ್ಪ, 4ನೇ ಬೆಂಗಳೂರು ತರಗಿನಪೇಟೇಲಿರುವ ಆಲಪ್ಪ, ಮುನಿಯಪ್ಪ, 5ನೇ ಡಿಟೋ ಪೇಟೆಯಲ್ಲಿರುವ ಅಡಿವೆಪ್ಪ, 7ನೇ ಬೆಂಗಳೂರು ಕಲಾಸಿಪಾಳ್ಯದಲ್ಲಿರುವ ಅಂಗಮ್ಮ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗೋವಿಂದರಾಜುಪಿಳ್ಳೆಯು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ತನ್ನ ಸಾಲಗಾರ್ರಿಗೆ ಪೂರ್ತಿ ಬಗ್ಗೆ ಮಾಹೆಯಾನಾ ತಪ್ಪದೆ ಕೋರ್ಟಿಗೆ (3—0—0) ರೂಪಾಯಿ ಹಾಜರ್ಮಾಡುವ ಷರತ್ತಿನ ಮೇಲೆ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವಸಾಲಕ್ಕೂ ಸ್ಥರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿರಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1895ನೇ ಇಸವಿ ಡಿಸೆಂಬರ್ 21ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ,

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಲೇಣೇ ಟಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ತರಗಿನಪೇಟೆ ದೇವರಂಟಿ ಗುರಂಣ ಫಾತೀ ಇವನ ವಾರಸ್ದಾರ ದೇವರಂಟಿ ಮುನಿಯಲ್ಲಪ್ಪ.	ರೂ. ಆ. ಪೈ. 30 13 6	..	ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್ 1890ನೇ ಇಸವಿ ಸ್ಮಾಲ್‌ಕಾಜ್ 879ನೇ ನಂಬರ್ ಡಿಕ್ರಿ ಮೊಬಲಗು.	
2	ಮಾತೃಬಾಯಿ ಹೊನ್ನಪ್ಪ ..	24 14 9	..	ಡಿಟೋ	
3	ವೆಂಕಟಸಾಮಿಪಿಳ್ಳೆ ..	28 11 9	..	ಡಿಟೋ	
4	ಆಲಪ್ಪ, ಮುನಿಯಪ್ಪ ..	14 0 0	..	ಪತ್ರದ ಬಾಬತು	
5	ಅಡಿವೆಪ್ಪ ..	27 0 0	..	ಡಿಟೋ	
6	ಮಿಠಾಯಿ ವೆಂಕಟಪ್ಪ ..	9 0 0	..	ಡಿಟೋ	
7	ಅಂಗಮ್ಮ ..	38 0 0	..	ಡಿಟೋ	

ಸ್ಯ 1896ನೇ ಇಸವಿ ಮಾರ್ಚ್ 10ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿದೆ.

ಟಿ. ನರಹರಿರಾವ್, ಡಿಸ್ಟ್ರಿಕ್ಟ್ ಜಡ್ಜ್.